**3** ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**OS 157/2018** **DW- 1**

ದಿಃ **16.01.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟಿಸವಾಲುಃ ವಾದಿ ಪರ ವಿ ಎಸ್ ಬಿ ವಕೀಲರಿಂದಃ

ಪ್ರತಿವಾದಿ ನಂ.1 ಇರವರ ವೈಯಕ್ತಿಕ ಹಾಗೂ ವ್ಯವಹಾರಿಕ ಜೀವನದ ಬಗ್ಗೆ ನನಗೆ ಯಾವದೇ ಮಾಹಿತಿ ಇಲ್ಲ. ನಿಡಿ.2 ದಾಖಲೆಯ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇದೆ. ನಿಡಿ.2 ದಾಖಲೆಗೆ ಸಂಬಂಧಿಸಿದಂತೆ ಪ್ರತಿವಾದಿ ನಂ.1 ಇವರ ಕಡೆಯಿಂದ ವಾದಿಗೆ ಯಾವದೇ ಖರೀದಿ ಮೊತ್ತ ಸಂದಾಯ ಆಗಿರುವುದಿಲ್ಲ ಎಂದರೆ ಸಾಕ್ಷಿ ಮೊತ್ತ ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ನಿಡಿ.2 ದಾಖಲೆಯಲ್ಲಿ ವಾದಿಗೆ ಪ್ರತಿವಾದಿ ಕಡೆಯಿಂದ ಹಣ ನೀಡಿದ ಬಗ್ಗೆ ಉಲ್ಲೇಖ ಇಲ್ಲ ಎಂದರೆ ನಿಜ. ವಾದಿ ಕುಟುಂಬಕ್ಕೆ ಮೋಸ ಮಾಡಿ ಮತ್ತು ಖೊಟ್ಟಿ ದಾಖಲೆಗಳ ಆದಾರದ ಮೇಲೆ ನಿಡಿ.2 ಖರೀದಿ ಪತ್ರಗಳನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

2. ದಾವಾ ಆಸ್ತಿಯನ್ನು ಖರೀದಿಸುವ ಪೂರ್ವದಲ್ಲಿ ಅದನ್ನು ಖರೀದಿಸುತ್ತಿರುವ ಬಗ್ಗೆ 1 ನೇ ಪ್ರತಿವಾದಿ ಪತ್ರಿಕಾ ಪ್ರಕಟಣೆ ನೀಡಿಲ್ಲ ಹಾಗೂ ಕಾನೂನು ಸಲಹೆ ಸಹ ಪಡೆದಿಲ್ಲ. ಪ್ರತಿವಾದಿ ನಂ.1 ನೀಡಿ ಮಾಹಿತಿ ಮೇರೆಗೆ ನೀವು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೇ ಸಾಕ್ಷಿ ಮಾಹಿತಿ ಸಹ ನೀಡಿರುತ್ತಾರೆ ಹಾಗೂ ನನಗೆ ಸಹ ವೈಯಕ್ತಿಕವಾಗಿ ವ್ಯವಹಾರದ ಬಗ್ಗೆ ಮಾಹಿತಿ ಇದೆ. ನಿಡಿ.2 ಖರೀದಿ ಪತ್ರಕ್ಕೆ ನಾನು ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ. ದಾವಾ ಆಸ್ತಿಗೆ ಸಂಬಂದಿಸಿದಂತೆ ಸಾಕ್ಷಿ ನುಡಿಯಲು ನನಗೆ ಪ್ರತಿವಾದಿ ನಂ.1 ಇವರ ಪರವಾಗಿ ಯಾವದೇ ಅಧಿಕಾರ ಇಲ್ಲ ಹಾಗೂ ವೈಯಕ್ತಿಕ ಮಾಹಿತಿ ಸಹ ಇಲ್ಲ ಎಂದರೆ ಸರಿಯಲ್ಲ. ಕೇವಲ 1 ನೇ ಪ್ರತಿವಾದಿಗೆ ಸಹಾಯವಾಗಲೇಂದು ಅವರ ಪರವಾಗಿ ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-
(ಶ್ರೀಮತಿ ದೀಪಾ ಜಿ ಮನೇರಕರ)
**3** ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.